ದಿನಾಂಕಃ 18.11.2025

ಅಸಲುದಾವಃ 29/2024

ಪಿ.ಡಬ್ಲ್ಯೂ: 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ದಾವ ಶೆಡ್ಯೂಲ್ ಜಮೀನನ್ನು ನಾನು ಹೋಗಿ ನೋಡಿರುತ್ತೇನೆ. ದಾವ ಸ್ವತ್ತು ಪಿತ್ರಾರ್ಜಿತ ಸ್ವತ್ತೊ ಸ್ವಯಾರ್ಜಿತ ಸ್ವತ್ತೊ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಪಿತ್ರಾರ್ಜಿತ ಸ್ವತ್ತು ಎಂದು ಉತ್ತರಿಸುತ್ತಾರೆ. ದಾವ ಸ್ವತ್ತು ಯಾರಿಂದ ಯಾವಾ ರೀತಿ ಬಂದಿರುತ್ತದೆ ಎಂದು ದಾಖಲಾತಿಗಳನ್ನು ನೋಡಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಪ್ರತಿವಾದಿಯರು ಮತ್ತು ಅವರ ಕುಟುಂಬದವರು ಯಾವುದೇ ವಿಭಾಗವಾಗಿಲ್ಲ ಒಟ್ಟು ಕುಟುಂಬಲ್ಲಿಯೇ ಬರುತ್ತಿದ್ದಾರೆ ಎಂದರೆ ಸಾಕ್ಷಿ ಹೌದು ಒಟ್ಟು ಕುಟುಂಬ ಎಂದು ಉತ್ತರಿಸುತ್ತಾರೆ. 1 ನೇ ಪ್ರತಿವಾದಿಯ ಗಂಡ ಅಂಗಡಿ ಬೋರಯ್ಯ ರವರಿಗೆ ಮೊದಲನೇ ಹೆಂಡತಿ ಹೊಂಬಾಳಮ್ಮ ಹಾಗು ಎರಡನೆಯ ಹೆಂಡತಿ 1 ನೇ ಪ್ರತಿವಾದಿ ಜಯಶೀಲಮ್ಮ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಕ್ರಯದ ಕರಾರಿನ ಕಾಲಕ್ಕೆ ಅಂಗಡಿ ಬೋರಯ್ಯನವರ ವಂಶವೃಕ್ಷವನ್ನು ಪಡೆದುಕೊಳ್ಳಲು ಪ್ರಯತ್ನ ಪಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಮೊದಲನೇ ಹೆಂಡತಿ ಹೊಂಬಾಳಮ್ಮರವರಿಗೆ ಚಂದ್ರಮ್ಮ ಎಂಬ ಮಗಳಿದ್ದಾಳೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಚಂದ್ರಮ್ಮ ಜನಿಸಿದ ನಂತರ ಮೊದಲನೆ ಹೆಂಡತಿ ಹೊಂಬಾಳಮ್ಮ ಅನಾರೋಗ್ಯಕ್ಕೆ ತುತ್ತಾಗಿ ತೀರಿಕೊಂಡ ಬಳಿಕ ಅಂಗಡಿ ಬೋರಯ್ಯನವರು ಜಯಶೀಲಮ್ಮನವರನ್ನು ಎರಡನೇ ಮದುವೆ ಮಾಡಿಕೊಂಡರು ಎಂದರೆ ಸಾಕ್ಷಿ ಅದೇನು ನಮಗೆ ಹೇಳಿಲ್ಲ ಎಂದು ಉತ್ತರಿಸುತ್ತಾರೆ. ಪ್ರತಿವಾದಿ 2 ರಿಂದ 4 ರವರು ಅಂಗಡಿ ಬೋರಯ್ಯನವರ ಎರಡನೇ ಹೆಂಡತಿ ಜಯಶೀಲಮ್ಮನವರ ಮಕ್ಕಳು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಅಂಗಡಿ ಬೋರಯ್ಯನವರು ಜೀವಿತಾವಧಿಯಲ್ಲಿ ಒಟ್ಟು ಕುಟುಂಬದ ವ್ಯವಹಾರವನ್ನು ಅವರೇ ನೊಡಿಕೊಳ್ಳುತ್ತಿದ್ದು, ಅವರು ತೀರಿಕೊಂಡ ಬಳಿಕ ಎರಡನೇ ಪ್ರತಿವಾದಿ ನಟರಾಜ್ ಒಟ್ಟು ಕುಟುಂಬದ ವ್ಯವಹಾರವನ್ನು ನೋಡಿಕೊಂಡು ಬರುತ್ತಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. 2 ನೇ ಪ್ರತಿವಾದಿ ನಟರಾಜ್ ಅವರು ಒಟ್ಟು ಕುಟುಂಬದ ವ್ಯವಹಾರನ್ನು ಸರಿಯಾಗಿ

ನೋಡಿಕೊಳ್ಳುತ್ತಿಲ್ಲವೆಂದು 4 ನೇ ಪ್ರತಿವಾದಿ 1 ರಿಂದ 3 ಮತ್ತು 5 ನೇ ಪ್ರತಿವಾದಿಗಳ ವಿರುದ್ದ ಮತ್ತು ಇತರರ ವಿರುದ್ದ 1 ನೇ ಅಪರ ಸಿವಿಲ್ ನ್ಯಾಯಾಲಯದಲ್ಲಿ ಭಾಗಾಂಶ ಕೋರಿ ದಾವೆ ಹಾಕಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಆ ದಾವೆಯಲ್ಲಿ ಕುಟುಂಬದ ಸ್ವತ್ತುಗಳನ್ನು ಯಾರಿಗೂ ಪರಭಾರೆ ಮಾಡಬಾರದು ಎಂದು ತಡೆ ಆದೇಶವಾಗಿದೆ ಎಂದರೆ ಸಾಕ್ಷಿ ಗೊತ್ತಿಲ್ಲ, ನಮಗೆ ಕರಾರು ಮಾಡಿಕೊಡುವಾಗ ಎಲ್ಲರೂ ಜೊತೆಯಲ್ಲಿಯೇ ಬಂದು ಮಾಡಿಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ಕರಾರಿಗಿಂತ ಮೊದಲು 2 ನೇ ಪ್ರತಿವಾದಿ ನಟರಾಜು ಅವರು ನಿಮಗೇನೂ ಗೊತ್ತಿರಲಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ನಟರಾಜು ಅವರು ನಿಮ್ಮ ಯಜಮಾನರ ಸ್ನೇಹಿತರು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಒಳಗೆರೆಹಳ್ಳಿ ಮಹೇಶ್ ಅವರು ನಿಮಗೆ ಗೊತ್ತಾ ಎಂದರೆ ಸಾಕ್ಷಿ ನಟರಾಜ್ ಅವರು ಕರೆದುಕೊಂಡು ಬಂದಿರುವ ಸಾಕ್ಷಿ ಅವರು ನಮಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಮಹೇಶ್ ಅವರು ನಿಮ್ಮ ಯಜಮಾನರ ಸ್ನೇಹಿತರು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ.

**ಮುಂದುವರಿದ ಪಾಟೀ ಸವಾಲು ವಿನಂತಿಯ ಮೇರೆಗೆ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

(ಶ್ರೀಮತಿ.ಹರಿಣಿ.ಎಂ.ಎಸ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.